ಬೆಂಗಳೂರು ಜಿಲ್ಲೆ ಆನೇಕಲ್ ಉಪ-ವಿಭಾಗ

# ಪತ್ರಿಕಾ ಪ್ರಕಟಣೆ

## 32 ಮೋಟಾರ್ ಸೈಕಲ್ ಗಳನ್ನು ಕಳವು ಮಾಡಿದ್ದ ಕುಖ್ಯಾತ ಆರೋಪಿ ಶರತ್ ಬಾಬು ಬಂಧನ

`~~~~****~~~~

ಆನೇಕಲ್ ಉಪ-ವಿಭಾಗದ ವ್ಯಾಪ್ತಿಯ ಜಿಗಣಿ ಪೊಲೀಸ್ ಠಾಣಾ ಸರಹದ್ದಿನಲ್ಲಿ ಕಳೆದ ನಾಲ್ಕು ತಿಂಗಳಿನಿಂದ ಮನೆಗಳ ಮುಂದೆ, ರಸ್ತೆ ಬದಿಗಳಲ್ಲಿ ಹಾಗೂ ಪಾರ್ಕಿಂಗ್ ಗಳಲ್ಲಿ ನಿಲ್ಲಿಸಿದ್ದ ಮೋಟಾರ್ ಸೈಕಲ್ ಗಳನ್ನು ಸತತವಾಗಿ ಕಳವು ಮಾಡುತ್ತಿದ್ದ ಆರೋಪಿ ಮತ್ತು ಮೋಟಾರ್ ಸೈಕಲ್ ಗಳ ಪತ್ತೆ ಬಗ್ಗೆ ಬೆಂಗಳೂರು ಜಿಲ್ಲೆ, ಪೊಲೀಸ್ ಅಧೀಕ್ಷಕರಾದ ಶ್ರೀ ಡಾ: ವಂಶಿಕೃಷ್ಣ.ಕೆ ಐ.ಪಿ.ಎಸ್ ಮತ್ತು ಅಪರ ಪೊಲೀಸ್ ಅಧೀಕ್ಷಕರಾದ ಶ್ರೀ ಲಕ್ಷ್ಮೀ ಗಣೇಶ್.ಕೆ ಕೆ.ಎಸ್.ಪಿ.ಎಸ್ ಹಾಗೂ ಆನೇಕಲ್ ಉಪ-ವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಶ್ರೀ ಮಲ್ಲೇಶ್.ಎಂ, ಕೆ.ಎಸ್.ಪಿ.ಎಸ್ ರವರ ಮಾರ್ಗದರ್ಶನದಲ್ಲಿ ನೇಮಕಗೊಂಡಿದ್ದ ಜಿಗಣಿ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್ ಪೆಕ್ಟರ್ ರವರಾದ ಶ್ರೀ ಸುದರ್ಶನ್.ಹೆಚ್.ವಿ ಮತ್ತು ಪೊಲೀಸ್ ಸಬ್-ಇನ್ಸ್ ಪೆಕ್ಟರ್ ರವರಾದ ಶ್ರೀ ಶಿವಲಿಂಗನಾಯ್ಕ ಹಾಗೂ ಸಿಬ್ಬಂದಿಗಳಾದ ಶ್ರೀ ರಾಜಣ್ಣ, ಹೆಚ್.ಸಿ-519, ಶ್ರೀ ರಾಜು.ಎಲ್, ಹೆಚ್.ಸಿ-754, ಶ್ರೀ ಮಹೇಶ್.ಕೆ.ಕೆ, ಹೆಚ್.ಸಿ-548, ಶ್ರೀ ರಾಜೇಶ್.ಎಂ, ಹೆಚ್.ಸಿ-395, ಶ್ರೀ ಕೋಟೇಶ್. ಪಿಸಿ-1155, ಶ್ರೀ ಶಿವಪ್ರಸಾದ್, ಪಿಸಿ-1409 ಶ್ರೀ ಮೆಹಬೂಬ್ ಶೇಖ್ ಪಿಸಿ-1436 ರವರುಗಳು ವಿಶೇಷ ಮುತುವರ್ಜಿ ವಹಿಸಿ, ಅತಿ ಹೆಚ್ಚು ಶ್ರಮವಹಿಸಿ, ಸತತವಾಗಿ ಮೋಟಾರ್ ಸೈಕಲ್ ಗಳನ್ನು ಕಳವು ಮಾಡುತ್ತಿದ್ದ ಆರೋಪಿ ಶರತ್ ಬಾಬು ಬಿನ್ ಕೃಷ್ಣನ್, 38 ವರ್ಷ, ಗೌಂಡರ್ ಜನಾಂಗ, ಡ್ರೈವರ್ ಕೆಲಸ, ಕಾರಂಪಟ್ಟಿ, ಗುಡಿಯಾತಂ ತಾಲ್ಲೂಕು, ವೆಲ್ಲೂರು ಜಿಲ್ಲೆ, ತಮಿಳುನಾಡು ಎಂಬುವರನ್ನು ಕಳವು ಮಾಡುತ್ತಿದ್ದ ಮೋಟಾರ್ ಸೈಕಲ್ ಸಮೇತ ಹಿಡಿದು, ದಸ್ತಗಿರಿ ಮಾಡಿ, ಹೆಚ್ಚಿನ ವಿಚಾರಣೆ ಜರುಗಿಸಿ, ಜಿಗಣಿ ಪೊಲೀಸ್ ಠಾಣೆ, ಬನ್ನೇರುಘಟ್ಟ ಪೊಲೀಸ್ ಠಾಣೆ, ಆನೇಕಲ್ ಪೊಲೀಸ್ ಠಾಣೆ ಮತ್ತು ಇತರೆ ಪೊಲೀಸ್ ಠಾಣೆಗಳ ಸರಹದ್ದಿನಲ್ಲಿ ಕಳವು ಮಾಡಿದ್ದ 32 ಮೋಟಾರ್ ಸೈಕಲ್ ಗಳನ್ನು ಅಮಾನತ್ತುಪಡಿಸಿ ಕೊಳ್ಳುವಲ್ಲಿ ಯಶಸ್ವಿಯಾಗಿರುತ್ತಾರೆ.

ಆನೇಕಲ್ ಉಪ-ವಿಭಾಗದ ವ್ಯಾಪ್ತಿಯಲ್ಲಿ ಕಳೆದ ನಾಲ್ಕು ತಿಂಗಳುಗಳಿಂದ ಸತತವಾಗಿ ಕಳುವಾಗಿದ್ದ ಸುಮಾರು 25.00.000-00 (ಇಪ್ಪತ್ತೈದು ಲಕ್ಷ) ರೂಗಳಿಗೂ ಹೆಚ್ಚು ಮೌಲ್ಯದ ಒಟ್ಟು 32 ಮೋಟಾರ್ ಸೈಕಲ್ ಗಳನ್ನು ಏಕ ಕಾಲದಲ್ಲಿ ಅಮಾನತ್ತುಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುವ ಜಿಗಣಿ ಪೊಲೀಸ್ ಠಾಣೆಯ ಅಧಿಕಾರಿ & ಸಿಬ್ಬಂದಿಗಳ ಕಾರ್ಯವನ್ನು ಹಿರಿಯ ಪೊಲೀಸ್ ಅಧಿಕಾರಿಗಳು ಪ್ರಶಂಸೆ ವ್ಯಕ್ತಪಡಿಸಿರುತ್ತಾರೆ.










ಪೊಲೀಸ್ ಅಧೀಕ್ಷಕರು,
ಬೆಂಗಳೂರು ಜಿಲ್ಲೆ.